# ಸಿವಿಲ್ ಜಡ್ಜ್ ಮತ್ತು ಜೆ .ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

**ಸಿ.ಸಿ. ಸಂಖ್ಯೆಃ 14/2019**

ಪಿರ್ಯಾದುದಾರರುಃ - ಸರ್ಕಾರದ ಪರವಾಗಿ
ಅರೇಹಳ್ಳಿ ಪೋಲೀಸ್

ವಿರುದ್ಧ

ಆರೋಪಿಃಗಳುಃ
1. ಹೇಮಂತಕುಮಾರ ಉಃ ಕುಮಾರ ಬಿನ್ ತಿಮ್ಮಯ್ಯ
35 ವರ್ಷ ವಯಸ್ಸು,
2. ಮೋಹನಕುಮಾರ ಬಿನ್ ರುದ್ರಯ್ಯ
31 ವರ್ಷ ವಯಸ್ಸು,

ಇಬ್ಬರೂ ಮಲ್ಲಾಪುರ ಗ್ರಾಮ,
ಅರೇಹಳ್ಳಿ ಹೋಬಳಿ,
ಬೇಲೂರು ತಾಲ್ಲೂಕು.

**ಃಃ ದೋಷಾರೋಪಣೆ ಃಃ**

ಶ್ರೀ ಪ್ರಸನ್ನಕುಮಾರ್ ಸಿ. ಬಿ.ಎ.ಎಲ್. ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬೇಲೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ದಿನಾಂಕಃ 08-05-2018 ರಂದು ಬೆಳಿಗ್ಗೆ 9-30 ಗಂಟೆ ಸಮಯದಲ್ಲಿ ಅರೇಹಳ್ಳಿ ಪೋಲೀಸ್ ಠಾಣಾ ಸರಹದ್ದಿಗೆ ಸೇರುವ ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ಮಲ್ಲಾಪುರ ಗ್ರಾಮದ 4 ರಸ್ತೆಗಳು ಕೂಡುವ ವೃತ್ತದಲ್ಲಿ ನೀರು ತರಲು ಬಂದ ಚಾಸಾ-1 ಸುರೇಶ ಎಂ.ಆರ್. ರವರಿಗೆ ಆರೋಪಿತರಾದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಸೂಳೆಮಗ ಬಂದ ಎಂದು ಚಾಸಾ-1 ರವರಿಗೆ ಶಾಂತಿಭಂಗ ಮಾಡುವಂತೆ ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುತ್ತೀರಿ. ಈ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 504 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

2 ಎರಡನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಚಾಸಾ-1 ರವರವರೊಂದಿಗೆ ಜಗಳ ತೆಗೆದು ನಂತರ ಗ್ರಾಮಸ್ಥರು ಇಬ್ಬರನ್ನು ಸಮಾಧಾನಪಡಿಸಿದ್ದು, ನಂತರ ಚಾಸಾ-1 ರವರು ವಾಪಾಸ್ಸು

ಮನೆಗೆ ಹೋಗುತ್ತಿದ್ದಾಗ ಗಣಪತಿ ಪೆಂಡಾಲ್ ನೇರದಲ್ಲಿ ಕಾಂಕ್ರೀಟ್ ರಸ್ತೆಯಲ್ಲಿ ಆರೋಪಿತರಾದ ನೀವುಗಳು ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಬಂದು ಚಾಸಾ-1 ರವರನ್ನು ಅಡ್ಡಗಟ್ಟಿ ಅವರು ಮುಂದೆ ಹೋಗದಂತೆ ತೀವ್ರ ಪ್ರತಿಬಂಧವನ್ನುಂಟು ಮಾಡಿರುತ್ತೀರಿ. ಈ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 341 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

3. ಮೂರನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಚಾಸಾ-1 ರವರವರೊಂದಿಗೆ ಜಗಳ ತೆಗೆದು ಆರೋಪಿತರಾದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಮಾರಕ ಆಯುಧವಾದ ದೊಣ್ಣೆಯಿಂದ ಚಾಸಾ-1 ರವರ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದು, ನಂತರ 2 ನೇ ಆರೋಪಿಯಾದ ನೀವು ಮಾರಾಕ ಆಯುಧವಾದ ಕಲ್ಲಿನಿಂದ ಚಾಸಾ-1 ರವರ ಕುತ್ತಿಗೆಯ ಭಾಗಕ್ಕೆ ಹಲ್ಲೆ ಮಾಡಿ ಸ್ವಯಪ್ರೇರಿತ ಸಾಧಾರಣ ಸ್ವರೂಪದ ರಕ್ತಗಾಯ ಉಂಟು ಮಾಡಿರುತ್ತೀರಿ. ಈ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 324 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

4.ನಾಲ್ಕನೇಯದಾಗಿ ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಚಾಸಾ-1 ರವರವರೊಂದಿಗೆ ಜಗಳ ತೆಗೆದು ಆರೋಪಿತರಾದ ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀವು ಚಾಸಾ-1 ರವರು ನೆಲದ ಮೇಲೆ ಬಿದ್ದಾಗ ಅವರ ಮರ್ಮಾಂಗಕ್ಕೆ ಕಾಲಿನಿಂದ ಒದ್ದು ಸ್ವಯಪ್ರೇರಿತ ಸಾಧಾರಣ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 323 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ ಹಾಗೂ ಸದರಿ ಆರೋಪವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 20-11-2021

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು.

## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು

**:ಸಿಸಿ ಸಂಖ್ಯೆಃ 14/2019:**

ಆರೋಪಿಯ ಹೆಸರು ಃ ಹೇಮಂತ ಕುಮಾರ ಉಃ ಕುಮಾರ ಆರೋಪಿ-1
ತಂದೆಃಗಂಡನ ಹೆಸರು ಃ ತಿಮ್ಮಯ್ಯ
ವಯಸ್ಸು ಃ 35 ವರ್ಷ
ವಾಸ ಸ್ಥಳ ಃ ಮಲ್ಲಾಪುರ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು (ಪ್ರಸನ್ನ ಕುಮಾರ್ ಸಿ.)
ದಿನಾಂಕಃ 20-11-2021 ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು

## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು

**:ಸಿಸಿ ಸಂಖ್ಯೆಃ 14/2019**

ಆರೋಪಿಯ ಹೆಸರು ಃ ಮೋಹನಕುಮಾರ ಆರೋಪಿ-2
ತಂದೆಃಗಂಡನ ಹೆಸರು ಃ ರುದ್ರಯ್ಯ
ವಯಸ್ಸು ಃ 31 ವರ್ಷ
ವಾಸ ಸ್ಥಳ ಃ ಮಲಾಲಪುರ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು (ಪ್ರಸನ್ನ ಕುಮಾರ್ ಸಿ.)
ದಿನಾಂಕಃ 20-11-2021 ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು